ಈ) ಪ್ರವಾಸಿಗರ ಅನುಕೂಲತೆಗೆ ಪ್ಯಾಕೇಜ್ ಟೂರ್ ಹೋಟೆಲ್‌ಗಳ ಮಾಹಿತಿ ಕೇಂದ್ರಗಳು ಮುಂತಾದ ಮೂಲ ಸೌಲಭ್ಯಗಳನ್ನು ಸರ್ಕಾರ ಕಲ್ಪಿಸಿಕೊಟ್ಟಿದೆಯೇ;

ಉ) ಹಾಗಿದ್ದರೆ, ಯಾವ ಪ್ರವಾಸಿ ಸ್ಥಾನಗಳಲ್ಲಿ ಅವುಗಳನ್ನು ಪ್ರಾರಂಭಿಸಲಾಗಿದೆಯೇ;

ಊ) ಈ ಪ್ರವಾಸಿ ಸ್ಥಳಗಳ ಅಭಿವೃದ್ಧಿಗೋಸ್ಕರ ಸರ್ಕಾರ ವೆಚ್ಚ ಮಾಡುವ ವರ್ಷವಾರು ಹಣ ಎಷ್ಟು?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು):

ಅ) ಹನ್ನೊಂದು

ಆ) ಯಾತ್ರಿ ನಿವಾಸ ನಿರ್ಮಾಣ, ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ಇತ್ಯಾದಿಗಳು.

ಇ)

ವರ್ಷ	ತಿಂಗಳು	ದೇಶಿಯ	ವಿದೇಶಿಯ
2000	ಜನವರಿ ಯಿಂದ ಡಿಸೆಂಬರ್	3,38,783	4,351
2001	ಜನವರಿ ಯಿಂದ ಡಿಸೆಂಬರ್	4,37,088	7,631
2002	ಜನವರಿ ಯಿಂದ ಡಿಸೆಂಬರ್	4,84,117	5,327

ಈ) ಹೌದು.

ಉ) 1. ವಾರಕ್ಕೊಮ್ಮೆ ಬೆಂಗಳೂರಿನಿಂದ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಏರ್ಪಡಿಸಿರುವ ವ್ಯವಸ್ಥಿತ ಪರವಾಸದಲ್ಲಿ ಬಿಜಾಪುರ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಬನಶಂಕರಿ, ಕೂಡಲಸಂಗಮ ಸೇರಿಸಲಾಗಿದೆ.

2. ಬಿಜಾಪುರ, ಬಾದಾಮಿ, ಐಹೊಳೆಯಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಹೋಟೆಲುಗಳನ್ನು ನಿರ್ವಹಿಸುತ್ತಿದೆ.

3. ಬಿಜಾಪುರ, ಐಹೊಳೆ, ಬಾಗಲಕೋಟೆ ಹಾಗೂ ಬಾದಾಮಿಗಳಲ್ಲಿ ಪ್ರವಾಸಿ ಕಛೇರಿಗಳನ್ನು ತೆರೆಯಲಾಗಿದೆ.

ಊ) ಅವಶ್ಯಕತೆ ಹಾಗೂ ಅನುದಾನ ಲಭ್ಯತೆಗನುಗುಣವಾಗಿ ಈ ಸ್ಥಳಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು.

2002-03ನೇ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಸಿ.ಆರ್.ಎಫ್. ಯೋಜನೆ ಅನುಷ್ಠಾನ

2250 (2385) ಶ್ರೀ ಪುಟ್ಟರಂಗನಾಥ್ ಎನ್.ಹೆಚ್. (ಬೇಲೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002-03ನೇ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಸಿ.ಆರ್.ಎಫ್. ಯೋಜನೆಯನ್ನು ತೆಗೆದುಕೊಳ್ಳಲಾಗಿದೆಯೇ;

ಆ) ನಬಾರ್ಡ್ ಯೋಜನೆಯನ್ನು ತೆಗೆದುಕೊಂಡಿದ್ದಲ್ಲಿ ವಿವರ ನೀಡುವುದು;

ಇ) ಬೇಲೂರು ಯಗಚಿ ನದಿ ಸೇತುವೆ ನಿರ್ಮಾಣ ಮಾಡುವ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಹೌದು. ಈ ಜಿಲ್ಲೆಯಲ್ಲಿ 2002-03ನೇ ಸಾಲಿನಲ್ಲಿ ಕೇಂದ್ರ ರಸ್ತೆ ನಿಧಿ ಯೋಜನೆಯಡಿಯಲ್ಲಿ 7 ರಸ್ತೆ ಕಾಮಗಾರಿಗಳನ್ನು ರೂ. 586.23 ಲಕ್ಷಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ.

ಆ) ನಬಾರ್ಡ್ ಯೋಜನೆಯಡಿಯಲ್ಲಿ ಆರ್‌ಐಡಿಎಫ್-7 ಹಾಗೂ ಆರ್‌ಐಡಿಎಫ್-8 ರಲ್ಲಿ ಕ್ರಮವಾಗಿ 4 ಮತ್ತು 3 ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಒಟ್ಟು ರೂ. 413.88 ಲಕ್ಷ ಮೊತ್ತದಲ್ಲಿ ಕೈಗೊಳ್ಳಲಾಗುತ್ತಿದೆ.

ಇ) ಸಧ್ಯ ಇಲ್ಲಿ ಸೇತುವೆ ಇದೆ. ಆದರೆ ಇದು ಕಿರಿದಾಗಿದೆ. ಅನುದಾನದ ಲಭ್ಯತೆ ಮೇರೆಗೆ ವಿಶಾಲವಾದ ಸೇತುವೆಯನ್ನು ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು.

ಅರಣ್ಯ ಇಲಾಖೆಯ ಅರಣ್ಯ ಪ್ರೇರಕರನ್ನು ಖಾಯಂಗೊಳಿಸುವುದು

2251 (2386) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಂಗಾಮಿಯಾಗಿ ಸೇವೆ ಸಲ್ಲಿಸುತ್ತಲಿರುವ ವಾಚರ್‌ಗಳನ್ನು ಖಾಯಂಗೊಳಿಸಲು ಏನು ಕ್ರಮ ತೆಗೆದುಕೊಂಡಿದ್ದೀರಾ;

ಆ) ಅರಣ್ಯ ಪ್ರೇರಕರ ವೇತನ ಎಷ್ಟು; ಇವರು ಖಾಯಂ ನೌಕರರೆ; ಅಲ್ಲದಿದ್ದಲ್ಲಿ, ಖಾಯಂಗೊಳಿಸದಿರಲು ಕಾರಣ ಏನು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಅರಣ್ಯ ಇಲಾಖೆಯಲ್ಲಿ ಹಂಗಾಮಿಯಾಗಿ ವಾಚರ್‌ಗಳು ಸೇವೆ ಸಲ್ಲಿಸುತ್ತಿರುವುದಿಲ್ಲ.

ಆ) ಅರಣ್ಯ ಪ್ರೇರಕರು ಅಂಶಕಾಲಿಕ ಕೆಲಸಗಾರರಾಗಿದ್ದು ಅವರಿಗೆ ಪ್ರತಿ ಮಾಹೆ ರೂ. 1,000-00 ಗೌರವಧನ (Honorarium) ಮಾತ್ರ ನೀಡಲಾಗುತ್ತಿದೆ. ಅರಣ್ಯ ಪ್ರೇರಕರು ಖಾಯಂ ನೌಕರರಲ್ಲ.

ಅರಣ್ಯ ಪ್ರೇರಕರು ಅಂಶಕಾಲಿಕ ಗೌರವಧನ ಮಾತ್ರ ಪಡೆಯುವ ಕೆಲಸಗಾರರಾಗಿದ್ದಾರೆ. ಅರಣ್ಯ ಪ್ರೇರಕರನ್ನು ಯಾವುದೇ ಸರ್ಕಾರಿ ಸೇವೆ : ಹುದ್ದೆಗೆ ಅವರ ವಿದ್ಯಾರ್ಹತೆಗೆ ಅನುಗುಣವಾಗಿ ನೇಮಕಾತಿ ಮಾಡಿಕೊಂಡಿರುವುದಿಲ್ಲ. ಅವರ ಸೇವೆಯನ್ನು ಅವರ ಬಿಡುವಿನ ವೇಳೆಯಲ್ಲಿ ಸಾರ್ವಜನಿಕರಿಗೆ ಗಿಡಮರಗಳ ಮಹತ್ವದ ಬಗ್ಗೆ ಅರಿವು ಮೂಡಿಸಿ, ಅವರ ಜಮೀನುಗಳಲ್ಲಿ ಗಿಡಮರಗಳನ್ನು ಬೆಳೆಸುವಲ್ಲಿ ಪ್ರೇರೇಪಿಸಲು ಉಪಯೋಗಿಸಿಕೊಳ್ಳಲಾಗುತ್ತಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಇಇ:56:ಎಫ್‌ಎಪಿ:98, ದಿನಾಂಕ 11-03-1998ರ ಅನ್ವಯ ಅರಣ್ಯ ಪ್ರೇರಕರ ಸೇವೆಯನ್ನು ಖಾಯಂಗೊಳಿಸುವುದನ್ನು ತಿರಸ್ಕರಿಸಲಾಗಿದೆ.

ಹಾಸನ-ಬೇಲೂರು ರಸ್ತೆ ಕಾಮಗಾರಿ

2252 (2387) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?